ಆದರೆ ಈ ರೆಸಾರ್ಟ್‌ಗಳಿಗೆ ಬರುವ ಪ್ರವಾಸಿಗರನ್ನು ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನದೊಳಗೆ ಅವರ (ಖಾಸಗಿ) ವಾಹನಗಳಲ್ಲಿ ಕೊಂಡೊಯ್ಯಲು ವನ್ಯಜೀವಿ ಸಂರಕ್ಷಣಾ ಕಾಯಿದೆ 1972 (ತಿದ್ದುಪಡಿ 1993) ರ ಸೆಕ್ಷನ್ 28 ಮತ್ತು 33 ರನ್ವಯ ಅನುಮತಿ ನೀಡಲಾಗಿದೆ.

ಆ) ಅನ್ವಯಿಸುವುದಿಲ್ಲ.

ಇ) ಸದರಿ ಖಾಸಗಿ ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ಸರ್ಕಾರಕ್ಕೆ ಸರಾಸರಿ ರೂ. 15 ಲಕ್ಷ ವಾರ್ಷಿಕ ಆದಾಯವಿರುತ್ತದೆ.

ಈ) ಅನ್ವಯಿಸುವುದಿಲ್ಲ. ಅರಣ್ಯ ಮತ್ತು ವನ್ಯಜೀವಿ ಪ್ರದೇಶಗಳಲ್ಲಿ ಪಾಲಿಸಬೇಕಾಗಿರುವ ನೈಸರ್ಗಿಕ ಪ್ರವಾಸೋದ್ಯಮ ನೀತಿ ಕುರಿತಂತೆ ಸರ್ಕಾರದ ಆದೇಶ ಸಂ: ಅಪಜೀ 60 ಎಫ್‌ಎಪಿ 2003, ದಿನಾಂಕ: 28–08–2004ರ ಪ್ರಕಾರ ಈ ಕೆಳಕಂಡವರಿಗೆ ವನ್ಯಜೀವಿ ಪ್ರದೇಶಗಳಲ್ಲಿ ಪ್ರವಾಸೋದ್ಯಮ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಮೆ: ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಲಿ.,

1. ಯುತ್ ಹಾಸ್ಟೆಲ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ನಂತಹ ಸಾಹಸ ಗುಂಪುಗಳು.
2. ಇಲಾಖಾ ಸೌಕರ್ಯಗಳು ಲಭ್ಯವಿಲ್ಲದ್ದಲ್ಲಿ ನೇರ ಪ್ರವೇಶಕ್ಕೆ ಅವಕಾಶ ಕಲ್ಪಿಸಿದೆ.

866 (1459) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರದ ಸುತ್ತಮುತ್ತಲಿನ ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಯಾವ ಯಾವ ಎಷ್ಟು ಉದ್ದದ ರಸ್ತೆಗಳು ಹದಗೆಟ್ಟಿರುವುದು ಗಮನಕ್ಕೆ ಬಂದಿದೆ;

ಇ) ಸದರಿ ರಸ್ತೆಗಳ ದುರಸ್ತಿಗೆ ಸರ್ಕಾರ ಕ್ರಮಗಳನ್ನು ಕೈಗೊಂಡಿದೆಯೇ;

ಈ) ಕೈಗೊಂಡಿದ್ದಲ್ಲಿ ಎಷ್ಟು ಅಂದಾಜು ವೆಚ್ಚದಲ್ಲಿ ಎಷ್ಟು ಉದ್ದದ ಯಾವ ರಸ್ತೆಗಳನ್ನು ದುರಸ್ತಿಪಡಿಸಲು ಯೋಚಿಸಲಾಗಿದೆ?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂದನ ಸಚಿವರು) :

ಅ) ಬಂದಿರುತ್ತದೆ.

ಆ) ರಸ್ತೆಗಳ ವಿವರಗಳನ್ನು ಅನುಬಂಧ–ಅ ರಲ್ಲಿ ನೀಡಿದೆ.

ಇ) ವಿವರಗಳನ್ನು ಅನುಬಂಧ ಆ ನಲ್ಲಿ ನೀಡಿದೆ.

ಈ) ವಿವರಗಳನ್ನು ಅನುಬಂಧ ಆ ನಲ್ಲಿ ನೀಡಿದೆ.

ಶ್ರೀ ವಾಟಾಳ್ ನಾಗರಾಜ್, ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1459ಕ್ಕೆ ಉತ್ತರಗಳು:–

ಅನುಬಂಧ – ಅ

ಸದರಿ ರಸ್ತೆಗಳ ದುರಸ್ತಿಗಾಗಿ ಹಾಗೂ ಅಭಿವೃದ್ಧಿಗಾಗಿ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

1) ಕೊಳ್ಳೇಗಾಲ–ಹನೂರು ಫಾಟ್ ರಸ್ತೆ: ಈ ರಸ್ತೆಗೆ ಸಂಬಂಧಿಸಿದಂತೆ 3054 ಶೀರ್ಷಿಕೆಯಲ್ಲಿ 1ನೇ ಹಂತದಲ್ಲಿ ಗುಂಡಿಗಳನ್ನು ಮುಚ್ಚಲಾಗಿರುತ್ತದೆ. ಹಾಗೂ ರೂ.13.00 ಲಕ್ಷಗಳ ಅಂದಾಜಿನಲ್ಲಿ ಮೋರಿಗಳ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ಹಾಗೂ 60.00 ಲಕ್ಷಗಳ ಅಂದಾಜು ಮೊತ್ತಕ್ಕೆ ರೇಖಾ ಅಂದಾಜನ್ನು ಸರಪಳಿ 83.40 ಕಿಮೀ ಇಂದ 110.40 ಕಿಮೀವರೆಗೆ ಗಡಿನಾಡು ಅಭಿವೃದ್ಧಿ ಕಾರ್ಯಕ್ರಮದಡಿ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಯೋಜನೆಯು ಸರ್ಕಾರದಲ್ಲೆ ಇದ್ದು, ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ನಿರ್ಧರಿಸಬೇಕಾಗಿರುತ್ತದೆ.

2) ಕುಂಬಾರಹುಂಡಿ–ತಾಳವಾಡಿ ರಸ್ತೆ ಅಭಿವೃದ್ಧಿ: ಈ ರಸ್ತೆಯಲ್ಲಿ ಗುಂಡಿಗಳನ್ನು 1 ನೇ ಹಂತದಲ್ಲಿ ಮುಚ್ಚಲಾಗಿರುತ್ತದೆ. ಹಾಗೂ ರೂ. 12.00 ಲಕ್ಷಕ್ಕೆ (ಸ.3.20 ರಿಂದ 4.30 ಕಿಮೀವರೆಗೆ) ಗಡಿನಾಡು ಅಭಿವೃದ್ಧಿ ಕಾರ್ಯಕ್ರಮದಡಿ ಗಡಿನಾಡು ರಸ್ತೆಗಳನ್ನು ಅಭಿವೃದ್ಧಿಪಡಿಸುವ ಯೋಜನೆಯು ಸರ್ಕಾರದಲ್ಲಿ ಇದ್ದು ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ನಿರ್ಧರಿಸಬೇಕಾಗಿರುತ್ತದೆ.

3) ಪುಣಜೂರು–ಬೇಡಗುಳಿ ರಸ್ತೆ: ಈ ರಸ್ತೆಗೆ ಸಂಬಂಧಿಸಿದಂತೆ ಗುಂಡಿ ಮುಚ್ಚುವ ಕಾಮಗಾರಿಗಳನ್ನು 1ನೇ ಹಂತದಲ್ಲಿ ಪೂರ್ಣಗೊಳಿಸಲಾಗಿರುತ್ತದೆ. ರೂ.40.00 ಲಕ್ಷಗಳ ಅಂದಾಜನ್ನು ತಯಾರಿಸಿ ಗಡಿನಾಡು ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಈ ರಸ್ತೆಯನ್ನು ಅಭಿವೃದ್ಧಿಪಡಿಸುವ ಯೋಜನೆಯು ಸರ್ಕಾರದಲ್ಲಿದ್ದು ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ನಿರ್ಧರಿಸಬೇಕಾಗಿರುತ್ತದೆ.

4) ವೆಂಕಟಯ್ಯ ಛತ್ರ ಕೊಡಿ ಉಗನೆ ಬಿಸಲವಾಡಿ ರಸ್ತೆ: ಈ ರಸ್ತೆಗೆ ಸಂಬಂಧಿಸಿದಂತೆ ಲೆಕ್ಕ ಶೀರ್ಷಿಕೆ 3054 ಯೋಜನೆ ಅಡಿಯಲ್ಲಿ 1.50 ಲಕ್ಷ ಮೊತ್ತದಲ್ಲಿ ಗುಂಡಿ ಮುಚ್ಚುವ ಕಾಮಗಾರಿಯನ್ನು 1ನೇ ಹಂತದಲ್ಲಿ ಪೂರ್ಣಗೊಳಿಸಲಾಗಿರುತ್ತದೆ ಹಾಗೂ ರೂ. 45.00 ಲಕ್ಷಗಳ ಅಂದಾಜು ಮೊತ್ತಕ್ಕೆ ಲೆಕ್ಕ ಶೀರ್ಷಿಕೆ 3054 ಯೋಜನೆಯಡಿಲ್ಲಿ ಟೆಂಡರ್ ಕರೆಯಲಾಗಿದ್ದು ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿರುತ್ತದೆ. ಹಾಗೂ ರೂ.40.00 ಲಕ್ಷಗಳಿಗೆ ರೇಖಾ ಅಂದಾಜನ್ನು ತಯಾರಿಸಿ (ಸರಪಳಿ 0.00 ರಿಂದ 8.00 ಕಿಮೀ) ಗಡಿನಾಡು ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಈ ರಸ್ತೆಯನ್ನು ಅಭಿವೃದ್ಧಿಪಡಿಸುವ ಯೋಜನೆಯು ಸರ್ಕಾರದಲ್ಲಿದ್ದು, ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ನಿರ್ಧರಿಸಬೇಕಾಗಿರುತ್ತದೆ.

5) ಬಂಡೀಪುರ–ಅಂಕಹಳ್ಳಿ ರಸ್ತೆ: ಈ ರಸ್ತೆಗೆ ಸಂಬಂಧಿಸಿದಂತೆ ರೂ. 80.00 ಲಕ್ಷಗಳಿಗೆ ರೇಖಾ ಅಂದಾಜನ್ನು ತಯಾರಿಸಿ (ಸ.8.00 ರಿಂದ 13.50 ಕಿಮೀವರೆಗೆ) ಗಡಿನಾಡು ಅಭಿವೃದ್ಧಿ ಕಾರ್ಯಕ್ರಮದಡಿ ರಸ್ತೆಯನ್ನು ಅಭಿವೃದ್ಧಿಪಡಿಸುವ ಯೋಜನೆಯು ಸರ್ಕಾರದಲ್ಲಿದ್ದು, ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ನಿರ್ಧರಿಸಬೇಕಾಗಿರುತ್ತದೆ.

6) ಪಾಲಾರ್ ಹೊಗೇನಕಲ್ ರಸ್ತೆ: ಈ ರಸ್ತೆಗೆ ಸಂಬಂಧಿಸಿದಂತೆ ಕಾಮಗಾರಿಯು ನಬಾರ್ಡ್ 10 ರಲ್ಲಿ ಟೆಂಡರ್ ಕರೆಯಲಾಗಿದ್ದು ಗುತ್ತಿಗೆದಾರರನ್ನು ನಿಗದಿಪಡಿಸುವ ಹಂತದಲ್ಲಿರುತ್ತದೆ. ಹಾಗೂ ಗಡಿನಾಡು ಅಭಿವೃದ್ಧಿ ಕಾರ್ಯಕ್ರಮದಡಿ ರೂ. 25.00 ಲಕ್ಷಗಳ ಅಂದಾಜನ್ನು ತಯಾರಿಸಿ ಈ ರಸ್ತೆಯನ್ನು ಅಭಿವೃದ್ಧಿಪಡಿಸುವ ಯೋಜನೆಯು ಸರ್ಕಾರದಲ್ಲಿದ್ದು, ಈ ಬಗೆಗೆ ಸರ್ಕಾರದ ಮಟ್ಟದಲ್ಲಿ ನಿರ್ಧರಿಸಬೇಕಾಗಿರುತ್ತದೆ.

7) ಕೊಳ್ಳೇಗಾಲ–ಜೆಲ್ಲಿ ಪಾಳ್ಯಂ ರಸ್ತೆ: ಈ ರಸ್ತೆಗೆ ಸಂಬಂಧಿಸಿದಂತೆ 3054 ಶೀರ್ಷಿಕೆಯಡಿ ಮೊದಲನೇ ಹಂತದಲ್ಲಿ ಗುಂಡಿಗಳನ್ನು ಮುಚ್ಚಲಾಗಿರುತ್ತದೆ. ಹಾಗೂ ರೂ. 50.00 ಲಕ್ಷಗಳಿಗೆ ರೇಖಾ ಅಂದಾಜನ್ನು ತಯಾರಿಸಿ ಗಡಿನಾಡು ಅಭಿವೃದ್ಧಿ ಕಾರ್ಯಕ್ರಮದಡಿ ರಸ್ತೆಯನ್ನು ಅಭಿವೃದ್ಧಿಪಡಿಸುವ ಯೋಜನೆಯು ಸರ್ಕಾರದಲ್ಲಿದ್ದು, ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ನಿರ್ಧರಿಸಬೇಕಾಗಿರುತ್ತದೆ.

<u>ಶ್ರೀ ವಾಟಾಳ್ ನಾಗರಾಜ್, ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1459ಕ್ಕೆ ಉತ್ತರಗಳು:–</u>

<u>ಅನುಬಂಧ 'ಆ'</u>

ಕ್ರಮ ಸಂಖ್ಯೆ	ರಸ್ತೆಯ ವಿವರಗಳು	ರಸ್ತೆಯ ಉದ್ದ ಕಿ.ಮೀ.ಗಳಲ್ಲಿ
1)	ಕೊಳ್ಳೇಗಾಲ ಹನೂರು ಘಾಟ್ ರಸ್ತೆ	10.00
2)	ಕುಂಬಾರ ಹುಂಡಿ–ತಾಳವಾಡಿ ರಸ್ತೆ	1.80
3)	ಮಣಜೂರು–ಬೇಡಗುಳಿ ರಸ್ತೆ	6.00
4)	ವೆಂಕಟಯ್ಯನ ಛತ್ರ ಕೋಡಿ ಊಗನೆ ಬಸಂವಾಡಿ ರಸ್ತೆ	8.00
5)	ಬಂಡಿಪುರ–ಅಂಕಹಳ್ಳಿ ರಸ್ತೆ	10.00
6)	ಟಾರ್ ಹೋಗೇನಕಲ್ ರಸ್ತೆ	10.00
7)	ಕೊಳ್ಳೇಗಾಲ ಜೆಲ್ಲಿಪಾಳ್ಯಂ ರಸ್ತೆ	10.00
	ಒಟ್ಟು	**55.80**

867(1460) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎಷ್ಟು ಕಾರ್ಮಿಕ ನ್ಯಾಯಾಲಯಗಳು ಕಾರ್ಯ ನಿರ್ವಹಿಸುತ್ತಿದೆ:

ಆ) ಸದರಿ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಬಾಕಿ ಉಳಿದಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು:

ಇ) ಸದರಿ ನ್ಯಾಯಾಲಯಗಳಲ್ಲಿ ಖಾಲಿ ಇರುವ ನ್ಯಾಯಾಧೀಶರ ಹುದ್ದೆಗಳ ಸಂಖ್ಯೆ ಎಷ್ಟು:

ಈ) ಖಾಲಿ ಹುದ್ದೆಗಳ ಭರ್ತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಹೆಚ್. ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ರಾಜ್ಯದಲ್ಲಿ 12 ಕಾರ್ಮಿಕ ನ್ಯಾಯಾಲಯಗಳು ಕಾರ್ಯ ನಿರ್ವಹಿಸುತ್ತಿವೆ.

ಆ) ಸದರಿ ನ್ಯಾಯಾಲಯಗಳಲ್ಲಿ ದಿನಾಂಕ: 31–12–2004 ಅಂತ್ಯಕ್ಕೆ ಇತ್ಯರ್ಥವಾಗದೇ ಬಾಕಿ ಉಳಿದಿರುವ ಮೊಕದ್ದಮೆಗಳ ಸಂಖ್ಯೆ: 11782.

ಇ) ಸದರಿ ನ್ಯಾಯಾಲಯಗಳಲ್ಲಿ 5 ಅಧ್ಯಕ್ಷಾಧಿಕಾರಿಗಳ ಹುದ್ದೆಗಳು ಖಾಲಿ ಇವೆ.

ಈ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್ ಜನರಲ್‌ರವರನ್ನು ಕೋರಲಾಗಿದೆ.